ಜೋರು ದನಿಯಲ್ಲಿ ಶೇಷಾಚಲಂ, ''ಸಾರ್, ಅಕ್ಕಾವ್ರು ಯಾಕೆ, ನೀವು ಕೆಲಸ ಕೆಡಿಸೋ ಹಾಗೆ ಕಾಣ್ತೆದೀರ, ಮೊದಲು ಅಕ್ಕಾವ್ರಹತ್ರ ಭಾಷೆ ತಗೋಳ್ಳಿ... ನಾನು ಒಂದು ಅಮೂಲ್ಯವಾದ ವಸ್ತು ತರ್ತೀನಿ, ಅದರ ಬಗ್ಗೆ ಅಕ್ಕಪಕ್ಕದವರತ್ರ ಬಾಯಿ ಬಿಟ್ಟರೆ ನಾನು ಸತ್ತ ಹಾಗೆ ಅಂತ. ಇದು ತುಂಬಾ ಕಾನ್ಫಿಡೆನ್ಷಿಯಲ್... ಮೂರನೇಯವರ ಕಿವೀಗೆ ಬೀಳಬಾರ್ದು. ಐದು ಕೋಟಿ ನಿಧಿ ನಿಮ್ಮನೇಲಿಟ್ಕೊಂಡಿದೀರ ಅಂದ್ರೆ... ಅಕ್ಕಪಕ್ಕದವ್ರು ಸುಮ್ನಿರ್ತಾರ? ನೀವೇ ಯೋಚ್ನೆ ಮಾಡಿ'' ಎಂದು ಈ ಯೋಜನೆಯನ್ನು ನಿಗೂಢವಾಗಿಸಿದ. ನನಗೆ ಅವನ ಮಾತಲ್ಲೂ ಸತ್ಯ ಇದೆ ಎನ್ನಿಸಿತು. ಐವತ್ತು ಸಾವಿರ ಮನೇಲಿದೆ ಅಂದ್ರೇನೆ ಜೀವ ಪುಕಪುಕ ಎನ್ನುವಾಗ ಇನ್ನು ಐದು ಕೋಟಿ... ಸುಮ್ಮನೆ ಮಾತೆ? ಮತ್ತೆ ಮಾತು ಮುಂದುವರೆಸಿದ ಶೇಷಾಚಲಂ, ''ಇನ್ನೊಂದು ವಿಚಾರ, ಈ ಹಾವು ನಿಮ್ಮ ಮನೇಲಿರೋವಾಗ ಪೊಲೀಸರಿಗೆ ಸಿಕ್ಕಿಬಿದ್ರೆ... ನಾನ್ ಬೇಲಬಲ್ ಅಫೇನ್ಸ್, ಹದಿಮೂರು ವರ್ಷ ಒಳಗಾಕ್ತಾರೆ...'' ಅವನು ಮಾತು ಕೇಳುತ್ತಿದ್ದಂತೆ ಕೈಕಾಲು ನಡುಕ ಉಂಟಾಯಿತು. ''ಇದೇನೋ ಹೊಸ ಗ್ರಹಚಾರ?'' ಎಂದೆ. ಅವನು ಎಲ್ಲದಕ್ಕೂ ಸಜ್ಜಾದವನಂತೆ, ''ಅಲ್ಲ ಸಾರ್, ಐದು ಕೋಟಿ ಬರುತ್ತೆ ಅಂದ್ರೆ, ಇಷ್ಟೂ ರಿಸ್ಕ್ ಇಲ್ದೆ ಇರೋಕೆ ಸಾಧ್ಯಾನ?'' ಎಂದ. ಅವನ ಮಾತು ನನಗೂ ಸರಿ ಎನಿಸಿತು.

ಒಳಗೊಳಗೆ ಹೆದರಿಕೆಯಾದರೂ 'ಒನ್ ಶಾಟ್ ಲೈಫ್ ಸೆಟ್ಲ್' ಎಂಬ ತತ್ವಕ್ಕೆ ಬದ್ಧನಾದೆ. ಅವನು ಮಾತು ಮುಂದುವರೆಸುತ್ತ, ''ಸಾರ್, ಬಹಳ ಇಂಪಾರ್ಟೆಂಟ್... ನೀವು ಮೈಯೆಲ್ಲ ಕಣ್ಣಾಗಿರಿ... ಇಷ್ಟು ದಿನ ಸಾಮಾನ್ಯರಾಗಿದ್ರಿ... ಯಾರಿಂದಾನೂ ನಿಮಗೆ ಹಾನಿ ಇರಲಿಲ್ಲ. ಆದ್ರೆ ಈಗ ಡಬಲ್ ಎಂಜಿನ್ ಹುಡುಕೋಕೆ ಹೋಗ್ತಿದೀರ ಅಂತ ಗೊತ್ತಾದ್ರೆ... ನಿಮ್ಮನ್ನ ಏನೂ ಮಾಡೋದಕ್ಕೆ ಹೇಸದ ಜನ ನಿಮ್ಮ ಬೆನ್ನ ಹಿಂದೆ ಇರ್ತಾರೆ...'' ಇದ್ಯಾವುದೋ ಮೆಕಾನಸ್ ಗೋಲ್ಡ್ ಸಿನಿಮಾದ ಕತೆ ಹೇಳುತ್ತಿದ್ದಾನಲ್ಲ ಎನಿಸಿತು. ಆದರೂ, ''ಅಲ್ಲಯ್ಯ ಅವ್ರಿಗೆ ಹೇಗ್ ಗೊತ್ತಾಗಬೇಕು ನಾನು ಹಾವನ್ನ ಹುಡುಕ್ತಿದೀನಿ ಅಂತ?'' ಎಂದೆ ಕಂಪಿಸುವ ದನಿಯಲ್ಲಿ. ಆಗಲೇ ನಾಲ್ಕಾರು ಜನ ನನ್ನ ಹಿಂದೆ ಬಿದ್ದಿರುವ ಅನುಭವವಾಯ್ತು! ಅವನು ಬಹು ಅನುಭವಿಯಂತೆ, ''ಸಾರ್, ನಾವು ಅಲ್ಲೇ ಎಡವೋದು, ಹತ್ತಾರು ಕೋಟಿ ಮಾಲು ಅಂದ್ರೆ ಯಾರಾದ್ರೂ ಬಿಡ್ತಾರ? ಅವ್ರೂ ನಮ್ಮ ಹಾಗೇ ಹುಡುಕ್ತಿರ್ತಾರೆ. ಇವ್ರು ಎದುರಾಳಿ ಅಂದ್ರೆ ಉಡಾಯಿಸಿಬಿಡ್ತಾರೆ'' ಎಂದ ಸಹಜ ದನಿಯಲ್ಲಿ. ನನ್ನ ಕೈಕಾಲು ತಣ್ಣಗಾಗತೊಡಗಿದವು. ''ಇಷ್ಟು ರಿಸ್ಕ್‌ನ ಅಗತ್ಯ ಇದೆಯೇ ಶೇಷು...'' ಎಂದೆ. ದನಿ ಗೊತ್ತಿಲ್ಲದೆ ತಗ್ಗಿತ್ತು.

''ಸಾರ್ ಎಚ್ಚರವಾಗಿರಲಿ ಅಂತ ಸೇಫರ್‌ಸೈಡ್‌ಗೆ ಅಂತ ಹೇಳಿದೆ. ನೀವು ಅಲ್ಲಿ ಹೇಳಿ ಕೇಳಿ ಲೋಕಲ್ಲು. ನಿಮ್ಮನ್ನ ಅಲ್ಲಿ ಯಾರು ಕೇಳ್ತಾರೆ ಸಾರ್?'' ಎಂದು ಧೈರ್ಯ ತುಂಬುವ ಪ್ರಯತ್ನ ಮಾಡಿದ.

ಇದಾದ ಮಾರನೆಯ ದಿನವೇ ನಾನು ಜಾಗ್ರತೆಯಿಂದ ನಿರ್ಜನ ತೋಪುಗಳಲ್ಲಿ, ಬೀಡು ಬಿಟ್ಟ ಜಮೀನುಗಳಲ್ಲಿ ಹುಡುಕಲು ಶುರುಮಾಡಿದೆ. ಹೊಸ ಮುಖಗಳನ್ನು, ಗೊತ್ತು ಗುರಿಯಿಲ್ಲದೆ ನಿರ್ಜನ ಪ್ರದೇಶಗಳಲ್ಲಿ ಓಡಾಡುತ್ತಿರುವವರನ್ನು ಎಚ್ಚರಿಕೆಯಿಂದ ಗಮನಿಸಿದೆ. ಎಲ್ಲಿ ನನ್ನನ್ನು ಉಡಾಯಿಸಿಬಿಡುತ್ತಾರೋ ಎಂಬ ಆತಂಕ ಬೇರೆ! ಕೆಲವೆಡೆ ಜಮೀನುಗಳನ್ನು ಕೊಂಡಿದ್ದ ಬಿಲ್ಡರ್‌ಗಳು ತಾವು ಕೊಂಡ ಜಮೀನಿಗೆ ಕಾಂಪೌಂಡ್ ಹಾಕಿಸುವ ಕೆಲಸ ಶುರುಮಾಡಿದ್ದರು. ಕಾಂಪೌಂಡ್‌ಗೆ ಪಾಯ ಅಗೆಯುತ್ತಿದ್ದ ಬೋವಿಗಳನ್ನು ಪರಿಚಯ ಮಾಡಿಕೊಂಡು ಅಗೆದ ಕಡೆ ಡಬಲ್ ಎಂಜಿನ್ ಸಿಗಬಹುದೇನೋ ಎಂದು ಬಹು ಕಾತುರದಿಂದ ನಿರೀಕ್ಷಿಸಿದೆ.